ವಿರಾಜಪೇಟೆ ತಾಲ್ಲೂಕು ರಸ್ತೆ ದುರಸ್ತಿ

673 - ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಬರುವ ರಸ್ತೆಗಳ ದುರಸ್ತಿ ಇನ್ನೂ ಪೂರ್ಣವಾಗದೆ ಬಹಳಷ್ಟು ನಿಧಾನ ಗತಿಯಲ್ಲಿ ಕೆಲಸವಾಗಿದ್ದು ಸಾರ್ವಜನಿಕರಿಗೆ - ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ;

ಆ) ಹಾಗಿದ್ದಲ್ಲಿ, ಅಪೂರ್ಣಗೊಂಡ ರಸ್ತೆಗಳ ದುರಸ್ತಿಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ರಸ್ತೆಗಳ ದುರಸ್ತಿಯನ್ನು ಮಾಡಲಾಗುತ್ತಿದ್ದು, ಆದಷ್ಟು ಶ್ರೀಘ್ರವಾಗಿ ಪೂರ್ಣಗೊಳಿಸುವಂತೆ ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಲಾಗಿದೆ.

ಆ) ಈ ಸಾಲಿನಲ್ಲಿ ಇದುವರೆವಿಗೂ ರಸ್ತೆ ದುರಸ್ತಿಗೆ 28.56 ಲಕ್ಷ ರೂ.ಗಳ ವೆಚ್ಚವನ್ನು ಮಾಡಲಾಗಿದೆ. ಇನ್ನುಳಿದ ತಿಂಗಳುಗಳ ಒಳಗಾಗಿ ಇನ್ನು ಸುಮಾರು 30.00 ಲಕ್ಷ ರೂ.ಗಳ ದುರಸ್ತಿ ಹಾಗೂ ನವೀಕರಣ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುತ್ತದೆ.

ಕೊಡಗು ಜಿಲ್ಲೆಯಲ್ಲಿ ಸೀಮೆಎಣ್ಣೆ ವಿತರಣೆ

664 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಗೆ ಪ್ರತಿ ತಿಂಗಳು ಎಷ್ಟು ಸೀಮೆಎಣ್ಣೆ ವಿತರಿಸಲಾಗುತ್ತಿದೆ. (ತಾಲ್ಲೂಕುವಾರು ವಿವರ ನೀಡುವುದು);

ಆ) ಕೊಡಗು ಜಿಲ್ಲೆಗೆ ಸರಬರಾಜು ಮಾಡಲು ನಿಗದಿಪಡಿಸಿರುವ ಸೀಮೆಎಣ್ಣೆಯ ಪ್ರಮಾಣವೆಷ್ಟು (ತಾಲ್ಲೂಕುವಾರು ನೀಡುವುದು)?

ಶ್ರೀ ಎನ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ನಿಗದಿತ ಪ್ರಮಾಣ ಹಾಗೂ ಹೆಚ್ಚುವರಿ ಬಿಡುಗಡೆ ಪ್ರಮಾಣದ ವಿವರ ಲಗತ್ತಿಸಿದೆ.

ಆ) ಹಂಚಿಕೆ ಮಾಡಲಾದ ಪ್ರಮಾಣವನ್ನು ವಿತರಣೆಗೆ ನಿಗದಿ ಪಡಿಸಲಾಗಿದೆ.

ಅನುಬಂಧ 1

ಪ್ರಶ್ನೆಸಂಖ್ಯೆ 664

ಕೊಡಗು ಜಿಲ್ಲೆಗೆ ನಿಗಧಿತ ಪ್ರಮಾಣದಲ್ಲಿ ಬಿಡುಗಡೆ ಮಾಡಿದ ಪ್ರಮಾಣ ಹಾಗೂ ಕೇಂದ್ರ ಸರ್ಕಾರವು ರಾಜ್ಯಕ್ಕೆ 1995ನೇ ನವೆಂಬರ್ ತಿಂಗಳಿನಿಂದ 2000È3000 ಕೆ.ಎಲ್. ನಂತೆ ಸೀಮೆಎಣ್ಣೆಯನ್ನು ಹೆಚ್ಚುವರಿಯಾಗಿ ನೀಡಿದ ಪ್ರಮಾಣದಲ್ಲಿ ಕೊಡಗು ಜಿಲ್ಲೆಯ ಗ್ರಾಮಾಂತರ ಪ್ರದೇಶದ ಪಡಿತರ ಚೀಟಿದಾರರಿಗೆ ವಿತರಿಸಲು ಬಿಡುಗಡೆ ಮಾಡಿದ ಸೀಮೆಎಣ್ಣೆಯ ಪ್ರಮಾಣ ಈ ಕೆಳಕಂಡಂತಿದೆ.

	ತಿಂಗಳು	ಪ್ರಮಾಣ	ನಿಗಧಿತ	ಹೆಚ್ಚುವರಿ	ಒಟ್ಟು	ಷರಾ
			(ಕೆ.ಎಲ್. ಗಳಲ್ಲಿ)			
ಡಿಸೆಂಬರ್	95		636	120	852	ಗ್ರಾಮಾಂತರ ಪ್ರದೇಶದ ಪಡಿತರ ಚೀಟಿದಾರರಿಗೆ ತಲಾ 1 ಲೀ.ನಂತೆ ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಹಂಚಿಕೆ ಮಾಡಿರುತ್ತೆ. ಮತ್ತೆ 825 ಎಂ.ಎಲ್.ನಂತೆ ಇತರ ಜಿಲ್ಲೆಗಳಿಗೆ ಬಿಡುಗಡೆ ಮಾಡಿದ ಪ್ರಮಾಣದಲ್ಲಿ ಪ್ರತಿ ಪಡಿತರ ಚೀಟಿಗೆ ಹೆಚ್ಚುವರಿಯಾಗಿ ಪ್ರಮಾಣ ನಿಗಧಿಪಡಿಸಿ 1 ಲೀ ನಂತೆ ವಿತರಿಸಲು ಹಂಚಿಕೆ ಮಾಡಿದೆ.
ನವೆಂಬರ್ ಮತ್ತು ಡಿಸೆಂಬರ್ ತಿಂಗಳ ಹೆಚ್ಚುವರಿ ಪ್ರಮಾಣ ಸೇರಿಸಿ ಎಲ್ಲಾ ಜಿಲ್ಲೆಗಳಿಗೆ ಬಿಡುಗಡೆ ಮಾಡಿದ ಪ್ರಮಾಣ ದಂತೆ ಈ ಜಿಲ್ಲೆಗೆ ಬಿಡುಗಡೆ ಮಾಡಿದ ಪ್ರಮಾಣ				96		
ಜನವರಿ	96		636	48	684	ಗ್ರಾಮಾಂತರ ಪ್ರದೇಶದ ಪಡಿತರ ಚೀಟಿಗೆ 396 ಎಂ.ಎಲ್. ನಂತೆ ಹೆಚ್ಚುವರಿಯಾಗಿ ಹಂಚಿಕೆ ಮಾಡಿದೆ.
ಫೆಬ್ರವರಿ	96		636	40	696	ಗ್ರಾಮಾಂತರ ಪ್ರದೇಶದ ಪಡಿತರ ಚೀಟಿಗೆ 524 ಎಂ.ಎಲ್. ನಂತೆ ಹೆಚ್ಚುವರಿಯಾಗಿ ಹಂಚಿಕೆ ಮಾಡಿದೆ.

ಅನುಬಂಧ-2

ಪ್ರಶ್ನೆ ಸಂ.664

ಕೊಡಗು ಜಿಲ್ಲೆಯ ತಾಲ್ಲೂಕುಗಳಿಗೆ 1995ನೇ ನವೆಂಬರ್ ತಿಂಗಳಿನಿಂದ ಫೆಬ್ರವರಿ 96ರವರೆಗೆ ಹಂಚಿಕೆ ಮಾಡಲಾದ ಸೀಮೆಎಣ್ಣೆಯ ವಿವರ

ಕ್ರ. ಸಂ.	ತಿಂಗಳು	ತಾಲ್ಲೂಕಿನ ಹೆಸರು	ನಿಗಧಿತ ಪ್ರಮಾಣ		ಹೆಚ್ಚುವರಿ ಪ್ರಮಾಣ		ಷರಾ
			ಪಟ್ಟಣ	ಗ್ರಾ.	ಪಟ್ಟಣ	ಗ್ರಾ.	
1.	ನವೆಂಬರ್ 95	ಮಡಿಕೇರಿ	72	96	-	-	
		ವಿರಾಜಪೇಟೆ	-	228	-	-	
		ಸೋಮವಾರಪೇಟೆ	-	240	-	-	
			72	564			636

2.	ಡಿಸೆಂಬರ್	95	ಮಡಿಕೇರಿ	72	96	12	72	
			ವಿರಾಜಪೇಟೆ	-	228	-	72	
			ಸೋಮವಾರಪೇಟೆ	-	240	-	60	
				72	564	12	204	852
3.	ಜನವರಿ	96	ಮಡಿಕೇರಿ	72	96	-	24	
			ವಿರಾಜಪೇಟೆ	-	228	-	12	
			ಸೋಮವಾರಪೇಟೆ	-	240	-	12	
				72	564		48	684
4.	ಫೆಬ್ರವರಿ	96	ಮಡಿಕೇರಿ	72	96	12	36	
			ವಿರಾಜಪೇಟೆ	-	228	-	-	
			ಸೋಮವಾರಪೇಟೆ	-	240	-	12	
				72	564	12	48	696

ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು

715 - ಶ್ರೀ ಬಸವನಗೌಡ ಆರ್. ಪಾಟೀಲ್ (ವಿಜಾಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *1994-95ನೇ ಸಾಲಿನಲ್ಲಿ ಸರ್ಕಾರವು ರಾಜ್ಯದ ಪ್ರತಿ ಜಿಲ್ಲೆಗೆ ಎಷ್ಟು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಟ್ಟಿದೆ. ವಿವರ ನೀಡುವುದು*

ಆ) *ವಿಜಾಪುರ ಜಿಲ್ಲೆಗೆ ಎಷ್ಟು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ನೀಡಲಾಗಿದೆ ಸಂಪೂರ್ಣ ವಿವರವನ್ನೊದಗಿಸುವುದು.*

ಇ) *ವಿಜಾಪುರ ಜಿಲ್ಲೆಯ ಇಂಡಿ ಮತ್ತು ಜಮಖಂಡಿಗೆ ಡೀಸಲ್ ಜನರೇಟರ್‌ಗಳನ್ನು ಮಂಜೂರು ಮಾಡಿರುವುದು ಸರ್ಕಾರದ ಗಮನದಲ್ಲಿಯೆ, ಜನರೇಟರ್‌ಗಳು ಕಾರ್ಯಗತವಾಗದಿರುವುದಕ್ಕೆ ಕಾರಣವೇನು?*

ಶ್ರೀ ಹೆಚ್.ಕೆ. ಪಾಟೀಲ್ (ಉಪ ಮುಖ್ಯಮಂತ್ರಿಗಳು) :

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) 1994-95ನೇ ಸಾಲಿನಲ್ಲಿ ಒಟ್ಟು 1675 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ವಿಜಾಪುರ ಜಿಲ್ಲೆಗೆ ಒದಗಿಸಿದೆ. ಅವುಗಳ ಸಾಮರ್ಥ್ಯವಾರು ವಿವರಗಳು ಕೆಳಕಂಡಂತಿದೆ.

	ಸಾಮರ್ಥ್ಯ	ಸಂಖ್ಯೆ
1)	25 ಕೆ.ವಿ.ಎ.	615
2)	63 ಕೆ.ವಿ.ಎ.	694
3)	100 ಕೆ.ವಿ.ಎ.	312
4)	250 ಕೆ.ವಿ.ಎ.	54
	ಒಟ್ಟು	1675

ಇ) ಹೌದು. ಈ ಹಿಂದೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ವತಿಯಿಂದ ಈ ವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿತ್ತು.